# ನನ್ನವೆರಡು ಹಳೇ ಕವನಗಳು

ಪದ್ಯ ಗದ್ಯದಷ್ಟು ಸುಲಭವಲ್ಲ, ಗದ್ಯದಷ್ಟು ಪದಗಳ ಲೆಕ್ಕಾಚಾರ ಮಾಡಿ ಪದ್ಯವನ್ನು ಬರೆಯಲೂ ಆಗುವುದಿಲ್ಲ. ಲೆಕ್ಕಾಚಾರಕ್ಕೆ ಬಿದ್ದು ಪದಗಳ ಆಯ್ಕೆಗೆ ಕೂತರೆ ಪದ್ಯ ಗದ್ಯವಾಗಿಬಿಡುವ ಅಪಾಯ. ನಾನು ಬರೆಯಲು ಶುರುಮಾಡಿದಾಗ ಸಕ್ಕತ್ ಲಹರಿಯಲ್ಲಿ ಪುಟಗಟ್ಟಲೆ ಪದ್ಯ ಬರೆದೆ, ಸ್ನೇಹಿತರೆಲ್ಲ ಮೆಚ್ಚಿದರು (ಹತ್ತು ವರುಷದ ಹಿಂದೆ) ಆಮೇಲೆ ಗದ್ಯವನ್ನೂ ಬರೆದೆ, ನಂತರ ಭಯವಾಗಿ ಎರಡನ್ನೂ ನಿಲ್ಲಿಸಿಬಿಟ್ಟೆ. ಬರೆಯುವುದು ನನ್ನೊಳಗಿಲ್ಲ ಎಂದು ಓದಲು ಕುಳಿತೆ. ಕೊನೆಗೊಮ್ಮೆ (ಓದಿ, ಓದಿ ಕೆಟ್ಟ ಕೂಚುಭಟ್ಟ ಎಂಬಂತೆ) ಗದ್ಯ ಬರೆಯಲು ಶುರುಮಾಡಿದೆ, ಪದಗಳ ಲೆಕ್ಕಾಚಾರ, ಸರ್ಕಸ್ಸು ಸ್ವಲ್ಪ ಭಯ ತಂದರೂ ಖುಷಿಕೊಟ್ಟಿತು. ಮುಂದೆಂದಾರೂ ನನ್ನ ಬರಹಗಳಿಗೆ ಹೆದರಿ ನನ್ನನ್ನು ಬರಹಗಾರನೆಂದು ನೀವು ಒಪ್ಪಿಕೊಂಡರೂ, ಕವಿಯೆಂದುಕೊಂಡರೆ ಮಾತ್ರ ಒದ್ದುಬಿಡುತ್ತೀರಿ ಅಂತ ನನಗೆ ಗೊತ್ತು. ಈ ಎರಡು ಪದ್ಯಗಳು ನಾನು ಹತ್ತು ವರುಷದ ಹಿಂದೆ (ಸ್ಕೂಲಿನಲ್ಲಿರುವಾಗ) ಬರೆದದ್ದು. ಮೊನ್ನೆ ಸೆಮಿಸ್ಟರ್ ಎಗ್ಸಾಮ್ಸ್ ಮುಗಿದು ಹಳೇ ಪುಸ್ತಕ-ಡೈರಿಗಳನೆಲ್ಲ ಹೊರಹಾಕುವಾಗ ಸಿಕ್ಕವು. ಇವು ಪದ್ಯಗಳೆಂದರೆ ಪದ್ಯಗಳು, ಬರೀ (ಪ್ರಾಸಕ್ಕೋಸ್ಕರ ಜೋಡಿಸಿದ) ಪದಗಳ ಸಾಲುಗಳೆಂದರೂ ಸರಿ. ಇವೇ ನನ್ನ ಕವಿತಾ ಶಕ್ತಿಯ ಚರಮಗೀತೆಗಳೂ ಇರಬಹುದು...

## ಸ್ನೇಹವೆಂದರೆ...

ಸ್ನೇಹವೆಂದರೆ,
ಎರಡು ಮನಗಳ ಬಂಧನ,
ತ್ಯಾಗದಿಂದರೆಯುವ ಚಂದನ,
ಪರಸ್ಪರ ನುಡಿವ ತೆರೆಮನ,
ಕಷ್ಟದ ಬೆಂಗಾಡಿನಲ್ಲೂ ಮಾರ್ದನಿಸುವ ಸುಖೀಗಾನ ।

ಸ್ನೇಹವೆಂದರೆ,
ಕಾರ್ಗತ್ತಲೊಳಗಿನ ಬೆಂಕಿಹುಳು,
ಮುಳುಗುವವನಿಗೆ ಹುಲ್ಲುಕಡ್ಡಿ,
ಬಿಸಿಲಿನ ಝಳಕ್ಕೆ ತಂಪು ನೆರಳು,
ಸುಖ ದು:ಖದ ಜೊತೆಯಿರಲು, ನಗಲೇನಡ್ಡಿ? ।

ಸ್ನೇಹವೆಂದರೆ,
ಸುಖದು:ಖಗಳ ಸಮಪಾಲು,
ಮರಳುಗಾಡಿನ ಸಿಹಿನೀರು,
ಹೊಂದಾಣಿಕೆಗಳ ಸವಿಬಾಳು,
ಮನಸು-ಮನಸುಗಳ ನಡುವೆ ಬೆಸೆವ ದೃಢಬೇರು ।

ಸ್ನೇಹವೆಂದರೆ,
ತಂಪಿನ ನವಿರಿನ ತಂಗಾಳಿ,
ಛಳಿಯ ಬೆಳಗಿನ ಬಿಳಿಮಂಜು,
ಸುಂದರ ಸಂಜೆಯ ಗೋಧೂಳಿ,
ಹೆಣೆಯುವ ಜೀವನ ಶಾಲಿಗೆ, ಚಿನ್ನದ ಜರಿಯಂಚು ।

## ಮೊದಲ ಮಳೆಯೆಂದರೆ...

ಮೊದಲ ಮಳೆಯೆಂದರೆ,
ಮೊದಲು ಧೂಳೆರಚುವ ಗಾಳಿ, ಕವಿಯುವ ಕಪ್ಪನೆ ಹಿರಿಮೋಡ,
ಸಿಡಿಯುವ ಸಿಡಿಲು-ಮಿಂಚು, ತಟತಟನೆ ಶುರುವಾಗುವ ಹನಿ ।
ಮೊದಲ ಮಳೆಯೆಂದರೆ,
ಭೋರನೆ ಸುರಿಯುವ ನೀರು, ಧಬಧಬ ಧಾರೆ ಚರಂಡಿಯಲಿ,
ಮಣ್ಣಿನ ಘಮಲು ಮೂಗಿನಲಿ, ಜೊತೆಗೆ ಹಿತವಾದ ಛಳಿ ।
ಮೊದಲ ಮಳೆಯೆಂದರೆ,
ಪಿಚಕ್ಕನೆ ಹಾರುವ ಕೆಸರು, ರಸ್ತೆ, ಹಾರಲೆತ್ನಿಸುವ ಚತ್ರಿಯ ಜೊತೆ ಕುಸ್ತಿ,
ಬೆನ್ನ ಹುರಿಯುದ್ದಕ್ಕೂ ನೀರ ಹನಿ, ಛಳಕ್ಕನೆ ನಡುಗುವ ಮೆ ।
ಮೊದಲ ಮಳೆಯೆಂದರೆ,
ಮೂಗು ಶೀತದಿಂದ ಸೊರಸೊರ, ಗಂಟಲು ಕಟ್ಟಿ ಧ್ವನಿ ಗೊರ ಗೊರ,
ಬಿಸಿಯುಸಿರಿನ ಒಡಲು, ಕಟಕಟಿಸುವ ಹಲ್ಲು ದವಡೆ ।
ಮೊದಲ ಮಳೆಯೆಂದರೆ,
ಸೌದೆ ಸಂಗ್ರಹಿಸಿ ಒಟ್ಟುವ ಕಾರ್ಯ, ಹೊಸ ಅವರೆ ಸಸಿ ನೆಡಬೇಕು,
ಬೇಲಿಯಲಿ ಡೇರೆ ಹೂ ಅರಳಬೇಕು, ಬಯಲಲಿ ಹಸಿ ಹುಲ್ಲು ಚಿಗುರಬೇಕು ।
ಮೊದಲ ಮಳೆಯೆಂದರೆ,
ಕರೆಂಟು ಇಲ್ಲದ ಕೋಣೆ, ಹಣತೆ-ಬುಡ್ಡಿಗಳ ಕಪ್ಪು ಮಸಿ,
ಗದ್ದೆಯೊಳಗೆ ಕೆಸರು ತುಂಬಿ, ಉತ್ತು, ನಾಟಿ ಮಾಡುವ ಸಮಯ ।
ಮೊದಲ ಮಳೆಯೆಂದರೆ,
ಬಾಯೆಲ್ಲ ಮಾವಿನ ನಾರು, ತಟತಟ ಸೋರುವ ಸೂರು
ಒಲೆಯೊಳಗಿನ ಹಲಸಿನ ಬೀಜ, ಮನೆಯೆಲ್ಲ ಹಲಸಿನ ಘಮ ।
ಮೊದಲ ಮಳೆಯೆಂದರೆ,
ಮದುವೆಯ ಸಂಭ್ರಮಗಳು, ಕಪ್ಪು ಕವಿದ ಭಾರೀ ಮುಗಿಲು ರಾತ್ರಿ,
ಹಾಸಿಗೆಯಲಿ-ಹೊದಿಕೆಯಡಿ, ಬೆಚ್ಚಿ ಕನವರಿಸುತ್ತದೆ-ಮಗು 'ಮ್' ।

---

## ಹ್ಯಾವ್ ಎ ನೈಸ್ ಡೇ

ಕೆ. ಎಸ್. ಶಿವಕುಮಾರ shivu_ks@rediffmail.com